# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-2832/2016/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 17/10/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ಐ.ಬಸವರಾಜ್, ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ, ದಾವಣಗೆರೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಟಿ.ಶ್ರೀಧರ್ ಬಿನ್ ಟಿ.ಉಚ್ಚಂಗಪ್ಪ, ಆರ್.ಟಿ.ಐ.ಕಾರ್ಯಕರ್ತರು, 9ನೇ ವಾರ್ಡ್, ವಾಲ್ಮೀಕಿ ನಗರ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಐ.ಬಸವರಾಜ್, ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ, ದಾವಣಗೆರೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಹರಪನಹಳ್ಳಿ ಹೋಬಳಿ, ಹರಪನಹಳ್ಳಿ ಕಂದಾಯ ಗ್ರಾಮದ ಸ.ನಂ.143/ಇ1 ವಿಸ್ತೀರ್ಣ 5.32 ಮತ್ತು ಸ.ನಂ.143/ಇ2 ವಿಸ್ತೀರ್ಣ 1.82 ಎಕರೆ ಭೂಮಿಯು ಕೌಟಿ ರುದ್ರಪ್ಪ ಮತ್ತು ನಂಜಪ್ಪರವರಿಂದ ರೂ.52177.85 ಗಳಿಗೆ ಹೊಸಪೇಟೆ ಅಸಿಸ್ಟೆಂಟ್ ಕಮಿಷನರ್ ಇವರಿಗೆ ಆಗಿರುತ್ತದೆ. ನಂತರ ಸದರಿ ಜಮೀನು ದಿ.21/7/1984 ರಂದು ಪುರಸಭೆ ಸುಪರ್ದಿಗೆ ಬಂದಿರುತ್ತದೆ. ನಂತರ ಸದರಿ ಜಮೀನಿನಲ್ಲಿ ಸರ್ಕಾರದಿಂದ 183 ನಿವೇಶನಗಳು ನಿರ್ಮಾಣಗೊಂಡಿದ್ದು, ಕೆಲವು ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ. ಸುಮಾರು 37 ನಿವೇಶನಗಳು ಹಾಗೆಯೇ ಉಳಿದು ಕೊಂಡಿವೆ. ಸರ್ಕಾರದಿಂದ ಲೇಔಟ್ ನಿರ್ಮಾಣವಾದ ಮೇಲೆ ಸದರಿ ಲೇಔಟ್‌ನಲ್ಲಿ ಒತ್ತುವರಿಯಾಗಿರುವುದನ್ನು ನಕ್ಷೆಯಲ್ಲಿ ತೋರಿಸಿರುತ್ತಾರೆ. ಆದ್ದರಿಂದ, ಪುರಸಭೆ ಲೇಔಟ್‌ನಲ್ಲಿ ಪುರಸಭೆಯ ನಿವೇಶನಗಳನ್ನು ಸುಪರ್ದಿಗೆ ತೆಗೆದುಕೊಂಡು ಅನಧಿಕೃತ ಮಾಲೀಕರಾಗಿರುವವರನ್ನು ಕೂಡಲೇ ಹೊರಹಾಕಿ ಒತ್ತುವರಿಯಾದ ಪ್ರದೇಶವನ್ನು ಪುರಸಭೆಯ ಸುಪರ್ದಿಗೆ ತೆಗೆದುಕೊಳ್ಳಬೇಕು ಮತ್ತು ಆ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರಿ ಈ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಅವರು ದಿ.8/1/14 ರಿಂದ ಹರಪನಹಳ್ಳಿಯಲ್ಲಿ ಮುಖ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಅವಧಿಯಲ್ಲಿ ಲೇಔಟ್‌ಗೆ ಸಂಬಂಧಿಸಿದಂತೆ ಖಾಲಿ ಇರುವ ನಿವೇಶನಗಳಿಗೆ ಸಂಬಂಧಿಸಿದಂತೆ ಯಾವುದೇ ಖಾತೆ ವರ್ಗಾವಣೆ ಮಾಡಿರುವುದಿಲ್ಲ. ಆದರೆ ದೂರುದಾರರು ಸದರಿ ಲೇಔಟ್‌ನಲ್ಲಿ ಕೆಲವೊಂದು ಖಾಲಿ ನಿವೇಶನಗಳ ಬಗ್ಗೆ ಉಲ್ಲೇಖಿಸಿರುತ್ತಾರೆ. ಪ್ರಯುಕ್ತ ಖಾಲಿ ನಿವೇಶನಗಳಿಗೆ ಸಂಬಂಧಿಸಿದಂತೆ ಖಚಿತವಾದ ಮಾಹಿತಿ ದೊರೆಯುತ್ತಿಲ್ಲ. ಪ್ರಯುಕ್ತ ಹಿಂದಿನ ಮುಖ್ಯಾಧಿಕಾರಿ, ಕಂದಾಯ ಅಧಿಕಾರಿ, ಕಂದಾಯ ನಿರೀಕ್ಷಕರು ಮತ್ತು ವಿಷಯ ನಿರ್ವಾಹಕರಿಂದ ಮಾಹಿತಿಯನ್ನು ಪಡೆಯಬೇಕಾಗಿ ಕೇಳಿರುತ್ತಾರೆ.

4) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ 2010–11ನೇ ಸಾಲಿನಿಂದ 2015–16ನೇ ಸಾಲಿನವರೆಗೆ ಅಕ್ರಮ ಖಾತೆ ಬದಲಾವಣೆಯಾಗಿರುತ್ತದೆ. ಆ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಬೇಕಾಗಿರುತ್ತದೆ. ಮುನ್ಸಿಪಲ್ ಲೇಔಟ್ ಕಡತಗಳು 'ಎ' ದರ್ಜೆಯ ಶಾಶ್ವತ ಕಡತವಾಗಿರುತ್ತದೆ. ಅದನ್ನು ತರಿಸಿಕೊಂಡು ಅದಕ್ಕೆ ತಕ್ಕಂತೆ ಮುಖ್ಯಾಧಿಕಾರಿಗಳು, ಮುನ್ಸಿಪಲ್ ಲೇಔಟ್‌ಗೆ ಸೇರಿದ ಖಾಲಿ ನಿವೇಶನಗಳನ್ನು ಪುರಸಭೆಯ ಸುಪರ್ದಿಗೆ ತೆಗೆದುಕೊಳ್ಳಬೇಕಾಗಿರುತ್ತದೆ. ಮುನ್ಸಿಪಲ್ ಲೇಔಟ್ ಜಾಗವನ್ನು ಅಳತೆ ಮಾಡಲು 3 ತಿಂಗಳಾದರೂ ತಹಶೀಲ್ದಾರ್‌ರವರು ಕ್ರಮ ಕೈಗೊಂಡಿರುವುದಿಲ್ಲ. 2000–01 ಸಾಲಿನಲ್ಲಿ ಈ ಮುನಿಸಿಪಲ್ ಲೇಔಟ್‌ನಲ್ಲಿ 208 ನಿವೇಶನಗಳಾಗಿರುತ್ತವೆ. ಒಟ್ಟು 25 ನಿವೇಶನಗಳನ್ನು ಪುರಸಭೆಯ ಅಧಿಕಾರಿಗಳು ಮತ್ತು ನೌಕರರು ಸೇರಿ ಹೆಚ್ಚಾಗಿ ಡೋರ್‌ನಂಬರ್‌ಗಳನ್ನು ನೀಡಿ ಅಕ್ರಮವೆಸಗಿರುತ್ತಾರೆ. 2000–01 ಅಸೆಸ್‌ಮೆಂಟ್ ಪುಸ್ತಕದಲ್ಲಿ ತೋರಿಸಿರುವ ಡೋರ್ ನಂಬರ್‌ಗಳು ಪುರಸಭೆಯ ಖಾಲಿ ನಿವೇಶನ ಎಂದು ತೋರಿಸಿರುತ್ತಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ಅಂದರೆ 2010 ರಿಂದ 2017ನೇ ಸಾಲಿನವರೆಗೆ ಪುರಸಭೆಯ ಖಾಲಿ ನಿವೇಶನಗಳು ಕೆಲವೊಂದು ಮಾಲೀಕರ ಹೆಸರಿಗ ವರ್ಗಾವಣೆಯಾಗಿರುತ್ತವೆಯೆಂದು ಹೇಳಿರುತ್ತಾರೆ.

5) ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಖಾಲಿ ನಿವೇಶನಗಳಿಗೆ ಸಂಬಂಧಿಸಿದಂತೆ ಖಚಿತವಾದ ಮಾಹಿತಿ ತಿಳಿಯುತ್ತಿಲ್ಲವೆಂದು ಒಂದು ಹಾರಿಕೆಯ ಉತ್ತರವನ್ನು ನೀಡಿರುವುದು ಕಂಡುಬರುತ್ತದೆ. ದೂರುದಾರರ ದೂರಿಗೆ ಸಂಬಂಧಪಟ್ಟಂತೆ ಎಷ್ಟು ನಿವೇಶನಗಳನ್ನು ನಿರ್ಮಿಸಲಾಗಿದೆ, ಅವುಗಳ ಪೈಕಿ ಎಷ್ಟು ನಿವೇಶನಗಳನ್ನು ಫಲಾನುಭವಿಗಳಿಗೆ ಮಂಜೂರು ಮಾಡಲಾಗಿದೆ, ಎಷ್ಟು ನಿವೇಶನಗಳು ಖಾಲಿಯಾಗಿರುತ್ತವೆ ಮತ್ತು ಎಷ್ಟು ನಿವೇಶನಗಳಿಗೆ ಸಂಬಂಧಪಟ್ಟಂತೆ ಪುರಸಭೆಯ ದಾಖಲಾತಿಗಳಲ್ಲಿ ನೋಂದಣೀಗಳನ್ನು ಮಾಡಲಾಗಿದೆಯೆಂಬ ವಿಚಾರಗಳನ್ನು ಪರಿಶೀಲಿಸುವ ಅಗತ್ಯ ಕಂಡುಬರುತ್ತಿದೆ. ಮತ್ತು ಸದರಿ ನಿವೇಶನಗಳನ್ನು ನಿರ್ಮಾಣ ಮಾಡಿ ಹಂಚಿಕೆ ಮಾಡಿದ

ಸಂದರ್ಭದಲ್ಲಿದ್ದ ಅಧಿಕಾರಿಗಳನ್ನು ಕೂಡ ವಿಚಾರಣೆ ನಡೆಸುವ ಅಗತ್ಯತೆ ಕಂಡುಬಂದ ಕಾರಣ, ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ದಾವಣಗೆರೆ ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು (ಪ್ರಭಾರ), ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರು ವರದಿಯನ್ನು ಸಲ್ಲಿಸಿದ್ದು, ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

"ಶ್ರೀ.ಮುಸ್ತಾಕ್ ಅಹ್ಮದ್, ಪಿ.ಐ. ಕಲೋ, ದಾವಣಗೆರೆ ರವರು ಸದರಿ ದುರು ಅರ್ಜಿ ವಿಚಾಣೆಗೆ ಸಂಬಂಧಿಸಿದಂತೆ ಹರಪನಹಳ್ಳಿ ಪುರಸಭೆಯ ಮುಖ್ಯಾಧಿಕಾರಿಯವರಿಂದ ಮಾಹಿತಿ ಹಾಗೂ ದಾಖಲಾತಿಗಳನ್ನು ಪಡೆದುಕೊಂಡು ಹಾಗೂ ಸದರಿ ಅರ್ಜಿಯಲ್ಲಿ ಆಪಾದಿಸಿರುವ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ದಾವಣಗೆರೆ ಜಿಲ್ಲೆ, ಹರಪನಹಳ್ಳಿ ಕಂದಾಯ ಗ್ರಾಮದ ಸ.ನಂ.143/ಇ1 ವಿಸ್ತೀರ್ಣ 5.32 ಮತ್ತು 143/ಇ2 ವಿಸ್ತೀರ್ಣ 1.82 ಎಕರೆ ಭೂಮಿಯು ಕೌಟಿ ರುದ್ರಪ್ಪ ಮತ್ತು ನಂಜಪ್ಪರವರಿಂದ ರೂ.52,177.85/- ಗಳಿಗೆ ಹೊಸಪೇಟೆ ಅಸಿಸ್ಟೆಂಟ್ ಕಮೀಷನರ್ ಇವರಿಗೆ ಆಗಿದ್ದು, ನಂತರ 19977 ರಲ್ಲಿ ಮುನಿಸಿಪಾಲಿಟಿ ಲೇಔಟ್ ನಿರ್ಮಾಣ ಮಾಡುವ ಸಂಬಂಧ 156 ನಿವೇಶನಗಳ ನಕಾಶೆಯನ್ನು ತಯಾರಿಸಿ ಪ್ರಕ್ರಿಯೆ ಪ್ರಾರಂಭಿಸಿದಾಗ ಜಮೀನು ನೀಡಿದವರ ತಕರಾರಿನಿಂದ ಲೇಔಟ್ ಪ್ರಕ್ರಿಯೆ ಸ್ಥಗಿತಗೊಂಡಿದ್ದು, ನಂತರ ಸದರಿ ಜಮೀನು ದಿ.21/7/84 ರಂದು ಪುರಸಭೆ ಸುಪರ್ದಿಗೆ ಬಂದಿದ್ದು, 1987 ರಲ್ಲಿ ಪುರಸಭೆ ವತಿಯಿಂದ ಖಾಸಗಿಯವರ ಮುಖಾಂತರ 189 ನಿವೇಶನಗಳುಳ್ಳ ಲೇಔಟ್ ನಕಾಶೆಯನ್ನು ಮಾಡಿಸಿದ್ದು ಸದರಿ ನಕಾಶೆಯನ್ನು ನಗರ ಯೋಜನೆ ಕಚೇರಿಯಿಂದ ಮಾಡಿಸದೇಇದ್ದು, ಅದೇ ನಕಾಶೆ ಪ್ರಕಾರ ಹಾಲಿ ಲೇಔಟ್ ಇರುವುದು ವಿಚಾರಣಾಧಿಕಾರಿಯವರ ವರದಿಯಿಂದ ಕಂಡುಬರುತ್ತದೆ.

ಹರಪನಹಳ್ಳಿ ಮುನ್ಸಿಪಾಲಿಟಿ ಲೇಔಟ್‌ಗೆ ಸಂಬಂಧಿಸಿದಂತೆ ಒಟ್ಟು 189 ಸೈಟ್‌ಗಳನ್ನು ನಿರ್ಮಿಸಿದ್ದು, ಇದರಲ್ಲಿ 44 ಸೈಟ್‌ಗಳನ್ನು ಹರಾಜು ಮೂಲಕ ಹಾಗೂ 139 ಸೈಟ್‌ಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಲು ಹಾಗೂ 6 ಸೈಟ್‌ಗಳನ್ನು ಸಿಬ್ಬಂದಿಯವರಿಗೆ ನೀಡಲು ಪ್ರಕ್ರಿಯೆ ಕೈಗೊಳ್ಳಲಾಗಿದ್ದು, 139 ಸೈಟ್‌ಗಳಿಗೆ ಒಟ್ಟು 525 ಅರ್ಜಿಗಳು ಬಂದಿದ್ದು ಇದರಲ್ಲಿ 139 ಫಲಾನುಭವಿಗಳನ್ನು ಲಾಟರಿ ಮೂಲಕ ಆಯ್ಕೆ ಮಾಡಲಾಗಿದ್ದು, ಲಾಟರಿಯಲ್ಲಿ ಆಯ್ಕೆಯಾದ 139 ಫಲಾನುಭವಿಗಳಲ್ಲಿ 114 ಫಲಾನುಭವಿಗಳು ಮಾತ್ರ ಹಣ ಪಾವತಿಸಿದ್ದು, ಸದರಿಯವರಿಗೆ ಸೈಟ್ ಮಂಜೂರು ಮಾಡಿ ಸೈಟ್ ನಂಬರ್ ನೀಡಿದ್ದು, ಉಳಿದ 25 ಫಲಾನುಭವಿಗಳು ಹಣ ಪಾವತಿಸದೇ ಇದ್ದು ಸದರಿ ನಿವೇಶನಗಳು ಪುರಸಭೆಗೆ ಉಳಿದಿದ್ದು 6 ಜನ ಸಿಬ್ಬಂದಿಯವರು ನೇರವಾಗಿ ಕಟ್ಟಿದ ಹಣನ್ನು ಕಾರಣಾಂತರದಿಂದ ವಾಪಸ್ ನೀಡಿದ್ದು ಒಟ್ಟು 31 ನಿವೇಶನಗಳು ಪುರಸಭೆಗೆ ಸೇರಿರುವುದು ತಿಳಿದುಬರುತ್ತದೆ.

ಪುರಸಭೆಗೆ ಸೇರಿದ 31 ನಿವೇಶನಗಳಲ್ಲಿ 1993-2000 ರವರೆಗಿನ ಅಸೆಸ್‌ಮೆಂಟ್ ಪುಸ್ತಕದಲ್ಲಿ ಒಟ್ಟು 10 ಜನರ ಹೆಸರುಗಳಿಗೆ ಹಾಗೂ 2001 ರ ಅಸೆಸ್‌ಮೆಂಟ್ ಪುಸ್ತಕದಲ್ಲಿ 14 ಜನರ ಹೆಸರುಗಳಿಗೆ ನೇರವಾಗಿ ಖಾತೆಗಳು ದಾಖಲಾಗಿರುವುದು ಕಂಡುಬಂದಿದ್ದು, ಇವುಗಳನ್ನು ಯಾವ ಆದೇಶ/ನಡಾವಳಿ/ದಾಖಲೆ ಆಧಾರದ ಮೇರೆಗೆ ಇವರ ಹೆಸರಿಗೆ ಬಂದಿರುತ್ತದೆಎಂಬ ಮಾಹಿತಿಯನ್ನು ದಾಖಲಾತಿಳಲ್ಲಿ ನಿರ್ವಹಿಸದೇ ಇರುವುದು ಹಾಗೂ ಈ ಬಗ್ಗೆ ಮಾಹಿತಿ ಒದಗಿಸಲು ಪುರಸಭೆಯ

ಮುಖ್ಯಾಧಿಕಾರಿಯವರು ವಿಫಲರಾಗಿರುವುದು ವಿಚಾರಣಾಧಿಕಾರಿಯವರ ವರದಿ ಹಾಗೂ ದಾಖಲಾತಿಗಳಿಂದ ಕಂಡುಬರುತ್ತದೆ.

ಪುರಸಭೆಯ ಮುಖ್ಯಾಧಿಕಾರಿಯವರು ಹಾಜರು ಪಡಿಸಿದ ದಾಖಲಾತಿಗಳನ್ನು ವಿಚಾರನಾಧಿಕಾರಿಯವರು ಪರಿಶೀಲಿಸಿ ನಂತರ ಖುದ್ದು ಸ್ಥಳ ಪರಿಶೀಲನೆ ಮಾಡಿದ್ದು, ಡೋರ್ ನಂ./ಸೈಟ್ ನಂ.579/526/110, 592/540/168, 602/55/178, 606/554/182, 658/602/42, 663/607/47, 676/620/60, ಒಟ್ಟು 7 ನಿವೇಶನಗಳು ದಾಖಲಾತಿಗಳನ್ವಯ ಭೌತಿಕವಾಗಿಯೂ ಸಹ ಹಾಲಿ ಪುರಸಭೆಗೆ ಸೇರಿದ ಖಾಲಿ ನಿವೇಶನಗಳಾಗಿರುತ್ತವೆ. ಅದೇರೀತಿ ಡೋರ್ ನಂ.633/1, 656/1, 688/1 ರ ನಿವೇಶನಗಳು ಸಹ ಬೇರೆ ಬೇರೆಯವರ ಹೆಸರಿನಲ್ಲಿ ಸೇರಿಕೊಮಡಿದ್ದು ಇವುಗಳನ್ನು ಯಾವ ಆದೇಶ/ನಡಾವಳಿ/ದಾಖಲೆ ಆಧಾರದ ಮೇರೆಗೆ ಇವರ ಹೆಸರಿಗೆ ಬಂದಿರುತ್ತದೆ ಎಂಬ ಬಗ್ಗೆ ದಾಖಲಾತಿಗಳನ್ನು ನಿರ್ವಹಿಸದೇ ಇರುವುದು ವರದಿಯಿಂದ ಕಂಡುಬರುತ್ತದೆ.

ವಿಚಾರಣಾಧಿಕಾರಿಯವರು ಮಾಡಿದ ಸ್ಥಳ ಪರಿಶೀಲನೆ ವೇಳೆ ಸದರಿ ಲೇಔಟ್‌ನ ಸರ್ಕಾರಿ ಶಾಲೆಯು ದಕ್ಷಿಣಕ್ಕೆ ಇರುವ ಸೈಟ್ ನಂಬರ್ 61 ರ ಪೂರ್ವಕ್ಕೆ ರಸ್ತೆಯವರೆಗೆ ಇರುವ 7 ನಿವೇಶನಗಳು ಸಹ ದಾಖಲಾತಿಗಳನ್ವಯ ಹಾಲಿ ಪುರಸಭೆಗೆ ಸೇರಿದ ಖಾಲಿ ನಿವೇಶನಗಳಂತೆ ಕಂಡುಬರುತ್ತಿದ್ದು, ಇವುಗಳಿಗೆ ಪುರಸಭೆಯಿಂದ ಯಾವುದೇ ನಿವೇಶನ ಸಂಖ್ಯೆ ನೀಡಿರುವುದಿಲ್ಲ. ಆದರೆ ಲೇಔಟ್ ನಕ್ಷೆಯಲ್ಲಿ 62 ರಿಂದ 68 ರವರೆಗೆ ಸಂಖ್ಯೆಯನ್ನು 2 ಕಡೆಗಳಲ್ಲಿ ನಮೂದಿಸಿದ್ದು ಈ ಬಗ್ಗೆ ವಿಚಾರಣಧಿಕಾರಿಯವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ, ಸರ್ಕಾರಿ ಶಾಲೆಯ ದಕ್ಷಿಣಕ್ಕೆ ಇರುವ ಸೈಟ್‌ಗಳು ಹಾಲಿ ಖಾಲಿ ಇದ್ದು, ಇವುಗಳಿಗೆ ನಿವೇಶನ ಸಂಖ್ಯೆ ನೀಡದೇ ಇದ್ದು, ಸ್ವಲ್ಪ ದೂರದಲ್ಲಿ ಸರಿಯಾದ ಡೋ ನಂ.62 ರಿಂದ 68 ನಿವೇಶನ ಸಂಖ್ಯೆ ನೀಡಿದ್ದ ಮನೆಗಳು ಇರುವುದು ಕಂಡುಬಂದಿರುತ್ತದೆ. ನಿವೇಶನ ಸಂಖಯೆ ನೀಡದ ಶಾಲೆಯ ದಕ್ಷಿಣಕ್ಕೆ ಇರುವ ನಿವೇಶನಗಳಲ್ಲಿ ಸಾರ್ವಜನಿಕರು ಅಕ್ರಮವಾಗಿ ಬೇಲಿ ಕಾಂಪೌಂಡ್ ಹಾಗೂ ಲಾಲ್ಯಾನಾಯ್ಕ, ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಕೊಪ್ಪಳ ರವರು ಅಕ್ರಮವಾಗಿ ಕಾರ್ ಶೆಡ್ ಮಾಡಿಕೊಂಡಿರುವುದು ಕಂಡುಬಂದಿರುತ್ತದೆ. ಅದೇ ರೀತಿ ನಿವೇಶನ ಸಂ.1/46 ಹಾಗೂ 6/6 ಹಾಗೂ 110 ರನಿವೇಶನಗಳ ಪಕ್ಕದಲ್ಲಿ ಪುರಸಭೆಗೆ ಸೇರಿದ ಸೈಟ್ ನಂಬರ್ ನೀಡದ ಖಾಲಿ ಜಾಗವು ಒತ್ತುವರಿಯಾದಂತೆ ಕಂಡುಬರುತ್ತಿರುತ್ತದೆ.

1993 ಹಾಗೂ 2001 ರ ಅಸೆಸ್‌ಮೆಂಟ್ ಪುಸ್ತಕದಲ್ಲಿ ನೇರವಾಗಿ 24+4=28 ಜನರ ಹೆಸರುಗಳು ಯಾವಾಗ? ಹೇಗೆ? ಹಾಗೂ ಯಾವ ಅಧಿಕಾರಿಗಳ ಅಧಿಕಾರಾವಧಿಯಲ್ಲಿ ಸೇರಿಸಲಾಗಿದೆ ಎಂಬ ಬಗ್ಗೆ ಮಾಹಿತಿಯು ಲಭ್ಯವಿಲ್ಲದೇ ಇದ್ದು, ಈ ಮಾಹಿತಿಯನ್ನು ಒದಗಿಸುವಲ್ಲಿ ಹಾಲಿ ಪುರಸಭೆಯ ಮುಖ್ಯಾಧಿಕಾರಿಯವರು ವಿಫಲರಾಗಿರುವುದು ತಿಳಿದುಬರುತ್ತದೆ.

ವಿಚಾರಣಾಧಿಕಾರಿಯವರು ಈ ಹಿಂದೆ ಕರ್ತವ್ಯ ನಿರ್ವಹಿಸಿದ ಸಿಬ್ಬಂದಿಯವರಾದ ಶ್ರೀ.ಮಂಜುನಾಥ ಹಾಗೂ ಸಂತೋಷ ಎಂಬುವವರಿಂದ ಲೇಔಟ್ ನಿರ್ಮಾಣ ಹಾಗೂ ನಕಾಶೆ ಬಗ್ಗೆ ಮಾಹಿತಿ ಪಡೆದು ಹೇಳಿಕೆ ಪಡೆದುಕೊಂಡಿರುತ್ತಾರೆ.

ಪುರಸಭೆಗೆ ಸೇರಿದ ಲೇಔಟ್‌ನಲ್ಲಿ ವಿವಿಧ ಕಡೆಗಳಲ್ಲಿ 28 ನಿವೇಶನಗಳು ಹಾಗೂ ಶಾಲೆಯ ದಕ್ಷಿಣಕ್ಕೆ ಇರುವ ನಿವೇಶನ ಸಂಖ್ಯೆ ನೀಡದ 7 ನಿವೇಶನಗಳು ಪುರಸಭೆಗೆ ಸೇರಿದ್ದು, ಸರ್ಕಾರದ ಕೋಟ್ಯಾಂತರ ರೂ.ಗಳಿಗೆ ಬೆಲೆ ಬಾಳುವ ಆಸ್ತಿಯಾಗಿರುವುದರಿಂದ, ಸ್ಥಳೀಯವಾಗಿ ಪುರಸಭೆಯವರು ಒತ್ತಡಕ್ಕೆ ಮಣಿಯುವ ಸಾಧ್ಯತೆ ಇದ್ದು, ಹಾಲಿ ಇರುವ

ಮುಖ್ಯಾಧಿಕಾರಿಯವರಾದ ಶ್ರೀ.ಬಸವರಾಜ್ ಇವರು ಈಗ್ಗೆ ಸುಮಾರು 18–20 ವರ್ಷಗಳಿಂದ ಹರಪನಹಳ್ಳಿಯ ಪುರಸಭೆಯಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದು ಕಳೆದ 4 ವರ್ಷಗಳಿಂದ ಪ್ರಭಾರಿ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರಿಗೆ ಈ ಲೇಔಟ್‌ಗೆ ಸಂಬಂಧಿಸಿದ ದಾಖಲೆಗಳು/ಮಾಹಿತಿ ನೀಡಲು ವಿಚಾರಣಾಧಿಕಾರಿಯವರು ಹಲವಾರು ಬಾರಿ ತಿಳಿಸಿದರೂ ವಿಳಂಬ ನೀತಿ ಅನುಸರಿಸಿ ಕೇವಲ ಹಾರಿಕೆ ಉತ್ತರವನ್ನು ಕೊಡುತ್ತಾ ಅರ್ಜಿ ವಿಚಾರಣೆಗೆ ಸರಿಯಾಗಿ ಸಹಕರಿಸದೇ ಯಾವುದೋ ಒತ್ತಡಕ್ಕೆ ಮಣಿದು ಕರ್ತವ್ಯ ನಿರ್ವಹಿಸುತ್ತಿರುವುದು ಕಂಡುಬರುತ್ತಿದ್ದು, ಇವರಿಂದ ಸರ್ಕಾರದ ಆಸ್ತಿ ಉಳಿಸುವುದು ಸಾಧ್ಯವಿರುವುದಿಲ್ಲ. ಆದ್ದರಿಂದ, ಇವರ ಮೇಲೆಕ್ರಮ ಜರುಗಿಸಬೇಕೆಂದು ಕೋರಿ ಹಾಗೂ ಮೇಲ್ಕಂಡ ಸರ್ಕಾರದ ಆಸ್ತಿಯು ಕೋಟ್ಯಾಂತರ ರೂ.ಗಳಿಗೆ ಬೆಲೆ ಬಾಳುವಂತದ್ದಾಗಿದ್ದು, ಇದನ್ನು ರಕ್ಷಿಸಿ ನಿರ್ವಹಣೆ ಮಾಡಲು ಉನ್ನತ ಮಟ್ಟದ ಅಧಿಕಾರಿಗಳನ್ನು ನೇಮಿಸುವುದು ಸೂಕ್ತವಾಗಿರುತ್ತದೆಯೆಂದು ತಿಳಿಸಿರುತ್ತಾರೆ.

ಆದ್ದರಿಂದ, ವಿಚಾರಣಾಧಿಕಾರಿಯವರು ಕೋರಿರುವಂತೆ ಶ್ರೀ.ಬಸವರಾಜ್, ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ ಇವರ ಮೇಲೆ ಕ್ರಮ ಕೈಗೊಳ್ಳುವಂತೆ ಕೋರಿ ಹಾಗೂ ಮೇಲ್ಕಂಡ ಸರ್ಕಾರದ ಆಸ್ತಿಯು ಕೋಟ್ಯಾಂತರ ರೂ.ಗಳಿಗೆ ಬೆಲೆ ಬಾಳುವಂತದ್ದಾಗಿದ್ದು, ಇದನ್ನು ರಕ್ಷಿಸಿ ನಿರ್ವಹಣೆ ಮಾಡಲು ಉನ್ನತ ಮಟ್ಟದ ಅಧಿಕಾರಿಗಳನ್ನು ನೇಮಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕು" ಎಂದು ಹೇಳಿರುತ್ತಾರೆ.

6) ತನಿಖಾಧಿಕಾರಿಯವರ ವರದಿಯನ್ನು ಪರಿಶೀಲಿಸಿದಾಗ, ಎದುರುದಾರರು ಒತ್ತುವರಿಯಾಗಿರುವ ನಿವೇಶನಗಳ ಬಗ್ಗೆ ಯಾವುದೇ ಕ್ರಮವನ್ನು ಕೈಗೊಳ್ಳದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

7) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಯಾವುದೇ ದಾಖಲಾತಿಗಳನ್ನು ನಿರ್ವಹಿಸದೆ, ಯಾವುದೇ ನಡವಳಿ ಅಥವಾ ದಾಖಲೆ ಇಲ್ಲದೆ 14 ಜನರ ಹೆಸರಿಗೆ ನೇರವಾಗಿ ಖಾತೆಗಳು ಆಗಿರುವ ಬಗ್ಗೆ ಹಾಗೂ ಖಾಲಿ ಇರುವ ಜಾಗವನ್ನು ಒತ್ತುವರಿ ಮಾಡಿರುವ ಬಗ್ಗೆ ವರದಿಯಲ್ಲಿ ತಿಳಿಸಿದ್ದು, ಆದ್ದರಿಂದ, ಸದರಿ ಸ್ವತ್ತುಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 17/10/13

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು–2,**
ಕರ್ನಾಟಕ ರಾಜ್ಯ, ಬೆಂಗಳೂರು.